**ದಿನಾಂಕ 10.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಶ್ರೀ  ಎನ್ ಸಿ ಎಸ್ . ವಾದಿಯ ಪರ ವಕೀಲರಿಂದಃ-**

**ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳು ನಿಜ ಇರುತ್ತವೆ. ಅವು ನನ್ನ ಮಾಹಿತಿ ಪ್ರಕಾರ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ.**

ಈ ಪ್ರಕರಣದಲ್ಲಿ ದಾಖಲಿಸಿಕೊಂಡಿರುವ ವಂಶಾವಳಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ನಿಪಿ 1 ಎಂದು, ದಾನಪತ್ರ ದಿಃ28.10.2016 ರ  ದೃಡೀಕೃತ ನಕಲನ್ನು  ಹಾಜರುಪಡಿಸಿದ್ದು ನಿಪಿ 2 ಎಂದು, ಕ್ರಯ ಪತ್ರ ದಿಃ07.12.2019 ರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ 3  ಎಂದು, ದಿಃ28.02.2020 ರ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನು ನಿಪಿ 4 ಎಂದು,  ದಾವಾ ಆಸ್ತಿಗೆ ಸಂಬಂದಿಸಿದ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 5 ರಿಂದ 7 ಎಂದು, ಹಕ್ಕು ದಾಖಲೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ನು ನಿಪಿ 8 ಎಂದು, ದಿಃ 02.07.2020 ರ ವಕೀಲರ ಮೂಲಕ ಕಳುಹಿಸಿರುವ ನೋಟಿಸಿನ ಪ್ರತಿಯನ್ನು ನಿಪಿ 9 ಎಂದು, ಸದರಿ ನೋಟಿಸನ್ನು ಕಳುಹಿಸಿದ ಬಗ್ಗೆ ಅಂಚೆ ರಸೀತಿಗಳನ್ನು ನಿಪಿ 10 ರಿಂದ 12 ಎಂದು, ನೋಟಿಸು ತಲುಪಿದ ಬಗ್ಗೆ ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿದ್ದು ನಿಪಿ 13 ರಿಂದ 15 ಎಂದು ಗುರುತಿಸಲಾಯಿತು.

ಪಾಟೀಸವಾಲುಃ  ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**

**ತಿ.ನರಸೀಪುರ.**